ತೀರ್ಪನ್ನು ನೀಡಿತ್ತು ಈ ತೀರ್ಪಿನ ವಿರುದ್ಧ ಕರ್ನಾಟಕ ರಾಂದರ್ಭಿಕ ಹಾಗೂ ದಿನಗೂಲಿ ನೌಕರರ ಸಂಘ ಹುಬ್ಬಳ್ಳಿಯು ಸರ್ವೋನ್ನತ ನ್ಯಾಯಾಲಯದಲ್ಲಿ ಎಸ್ ಎಲ್‌ಪಿ ಸಂಖ್ಯೆ 3112–3314/2001 ನ್ನು ನಲ್ಲಿಸಿತ್ತು (ಸಿವಿಲ್ ಅಪೀಲು ಸಂಕ್ಯೆ 1861–2063/2001)

ಮೇಲ್ಕಂಡ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಐದು ನ್ಯಾಯಾಧೀಶರ ಸಂವಿಧಾನ ಪೀಠವು ದಿನಾಂಕ 10 4 2006 ರಂದು ತೀರ್ಪನ್ನು ನೀಡಿದ್ದು ಸಂಘದ ಸಿವಿಲ್ ಅಪೀಲನ್ನು ವಜಾಗೊಳಿಸಿದೆ ಸಂವಿಧಾನಾತ್ಮಕವಾಗಿ ನಿಗದಿ ಪಡಿಸಿದ ವಿಧಾನದ ಅನುಸಾರ ನೇಮಕಗೊಂಡ ವ್ಯಕ್ತಿಗಳ ಸೇವೆಯನ್ನು ಸಕ್ರಮಗೊಳಿಸಲು ಅಥವಾ ಅವರ ಸೇವೆಯನ್ನು ಖಾಯಂಗೊಳಿಸಲು ಕ್ರಮ ಕೈಗೊಳ್ಳಬಾರದೆಂದು ನ್ಯಾಯಾಲಯವು ಆದೇಶಿಸಿದೆ ಆದರೆ ನಿಗದಿತ ನೇಮಕಾತಿ ವಿಧಾನವನ್ನು ಬಹು ಪಾಲು ಪಾಲಿಸಿ ಮಾಡಿದ ನೇಮಕಾತಿಗಳನ್ನು ಒಂದು ಬಾರಿಯ ಕ್ರಮವಾಗಿ ಕೆಲವು ಷರತ್ತುಗಳನ್ನು ಪೂರೈಸಿದಲ್ಲಿ ಸಕ್ರಮಗೊಳಿಸಬಹುದೆಂದು ಈ ತೀರ್ಪಿನಲ್ಲಿ ಹೇಳಲಾಗಿದೆ ನ್ಯಾಯಾಲಯದ ಈ ತೀರ್ಪಿನ ಪರಿಣಾಮವನ್ನು ಪರಿಶೀಲಿಸಿ ಸಚಿವ ಸಂಪುಟಕ್ಕೆ ಶಿಫಾರಸನ್ನು ನೀಡಲು ದಿನಾಂಕ 27 12 2006ರಂದು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ ಅದರ ಶಿಫಾರ್ಸನ್ನು ನಿರೀಕ್ಷಿಸಲಾಗಿದೆ

350 (654) ಶ್ರೀ ಗೋಪಾಲಕೃಷ್ಣ ಬೇಳೂರು ಬಿ ಕೆ (ಸಾಗರ) ಪೂಜಾರಿ ಕೆ (ಬೈಂದೂರು) ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆ ಸಾಗರ ಪಟ್ಟಣದಲ್ಲಿ ಬ್ರಿಟೀಷರ ಕಾಲದಲ್ಲಿ ನಿರ್ಮಿಸಿದ ಸಾಗರ ಸಬ್ ಜೈಲು ತೀರಾ ಹಳೆಯದಾಗಿ ಬೀಳುವ ಹಂತದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಹೊಸ ಕಟ್ಟಡ ನಿರ್ಮಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಕಟ್ಟಡವು ಹಳೆಯದಾಗಿದ್ದರೂ ಬೀಳುವಂತಹ ಪರಿಸ್ಥಿತಿಯಲ್ಲಿ ಇದಕ್ಕೆ ದುರಸ್ತಿ ಕಾರ್ಯ ಅಗತ್ಯವಿದೆ, ಈ ದುರಸ್ತಿ ಕೆಲಸವನ್ನು ಕೈಗೆತ್ತಿಕೊಳ್ಳು ಲೋಕೋಪಯೋಗಿ ಇಲಾಖೆಯನ್ನು ಕೋರಿದೆ

ಆ) –ಅದೇ–

351 (655) ಶ್ರೀ ಗೋಪಾಲಕೃಷ್ಣ ಬೇಳೂರು ಬಿ ಕೆ (ಸಾಗರ) ಪೂಜಾರಿ ಕೆ (ಬೈಂದೂರು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆ ಸಾಗರದ ಮೆಸ್ಕಾಂ ಉಪ ವಿಭಾಗದಲ್ಲಿ 1800 ವಿದ್ಯುತ್ ಕಂಬಗಳು ಹಾಗೂ 70 ಪರಿವರ್ತಕ (ಡಿ ಟಿ ಸಿ ಗಳು)ಗಳ ಕೊರತೆಯಿಂದಾಗಿ ಸಾರ್ವಜನಿಕರಿಗೆ ವಿದ್ಯುತ್ ಸಂಪರ್ಕದಲ್ಲಿ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಕಂಬಗಳನ್ನು ಹಾಗೂ ಪರಿವರ್ತಕಗಳನ್ನು ಕೂಡಲೇ ಸರಬರಾಜು ಮಾಡಲು ಸರ್ಕಾರ ಕೈಗೊಂಡ ಕ್ರಮವೇನು,

ಇ) ನಿರ್ದಿಷ್ಟ ಕಾಲಮಿತಿಯಲ್ಲಿ ಕಂಬಗಳು ಹಾಗೂ ಪರಿವರ್ತಕಗಳನ್ನು ಸರಬರಾಜು ಮಾಡಲಾಗುವುದೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಮತ್ತು ಆ) ಶಿವಮೊಗ್ಗ ಜಿಲ್ಲೆಯ ಸಾಗರದ ಮೆಸ್ಕಾಂ ವಿಭಾಗಕ್ಕೆ 4711 ಸಂಖ್ಯೆಗಳ ವಿವಿಧ ರೀತಿಯ/ಉದ್ದದ ಕಂಬಗಳ ಸರಬರಾಜಿಗಾಗಿ ಖರೀದಿ ಆದೇಶವನ್ನು ಈಗಾಗಲೇ ನೀಡಲಾಗಿದ್ದು ಅದರಲ್ಲಿ ಸಾಗರ ಉಪ ವಿಭಾಗಕ್ಕೆ ಒಟ್ಟು 1018 ಕಂಬಗಳನ್ನು ಹಂಚಿಕೆ ಮಾಡಲಾಗಿದ್ದು, ಕಂಬಗಳ ಸರಬರಾಜು ಪ್ರಕ್ರಿಯೆಯು ಪ್ರಗತಿಯಲ್ಲಿದೆ 2006–07ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳ ಅಡಿಯಲ್ಲಿ ಸಾಗರ ಉಪವಿಭಾಗದಲ್ಲಿ ಒಟ್ಟು 47 ಸಂಖ್ಯೆಗಳ ಹೊಸ ವಿದ್ಯುತ್ ಪರಿವರ್ತಕಗಳನ್ನು ಈಗಾಗಲೇ ಸ್ಥಾಪಿಸಲಾಗಿದೆ ಅದರಲ್ಲಿ ವ್ಯವಸ್ಥೆ ಸುಧಾರಣೆಯಲ್ಲಿಯೇ 36 ಸಂಖ್ಯೆಗಳ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲಾಗಿದೆ ಸಾಗರ ಉಪವಿಭಾಗಕ್ಕೆ ಸಂಬಂಧಿಸಿದಂತೆ ಒಟ್ಟು 70 ವಿದ್ಯುತ್ ಪರಿವರ್ತಕಗಳ ಬೇಡಿಕೆಗೆ ಪೂರಕವಾಗಿ 47 ವಿದ್ಯುತ್ ಪರಿವರ್ತಕಗಳನ್ನು ಈಗಾಗಲೇ ಒದಗಿಸಲಾಗಿದ್ದು, ಇನ್ನೂ 23 ವಿದ್ಯುತ್ ಪರಿವರ್ತಕಗಳನ್ನು ಆದ್ಯತೆಯ ಮೇರೆಗೆ ಪೂರ್ಣಗೊಳ್ಳುವ ಕಾಮಗಾರಿಗಳಿಗೆ ಒದಗಿಸಲಾಗುವುದು

ಇ) ನಿರ್ದಿಷ್ಟ ಕಾಲಮಿತಿಯಲ್ಲಿ ಕಂಬಗಳು ಮತ್ತು ಪರಿವರ್ತಕಗಳನು ಸರಬರಾಜು ಮಾಡಲು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಈಗಾಗಲೇ ಕ್ರಮಗಳನ್ನು ಕೈಗೊಂಡಿರುತ್ತದೆ